# 24

# “ನಿಂದೆಯೇ ... ಶ್ರೇಷ್ಠವೆಂದೆನಿಸಿಕೊಂಡನು”

# (11:23-29)

ನಾವು ಮಾಡುವಂಥ ಕೆಲವು ನಿರ್ಧಾರಗಳಲ್ಲಿ ಕೆಲವು ಪ್ರಮುಖವಾಗಿದ್ದು, ಇನ್ನೂ ಕೆಲವು ಪ್ರಮುಖವಾಗಿರುವದಿಲ್ಲ. ಇಬ್ರಿಯ ಪತ್ರಿಕೆಯನ್ನು ಯಾವ ಜನರಿಗೆ ಬರೆಯಲಾಗಿತ್ತು ಆ ಜನರು ನಿರ್ಧಾರ ಮಾಡುವ ವಿಚಾರದಲ್ಲಿ ಗೊಂದಲಕ್ಕೊಳಗಾಗಿದ್ದರು: ಕ್ರೈಸ್ತರಾಗಿರಬೇಕಿತ್ತೋ ಅಥವಾ ಯೆಹೂದ್ಯ ಮತಕ್ಕೆ ಹಿಂದಿರುಗಬೇಕೋ ಎಂಬ ಗೊಂದಲದಲ್ಲಿದ್ದರು. ಆ ಜನರು ಬಹು ಇಷ್ಟ ಪಟ್ಟಿದ ಒಬ್ಬ ಮನುಷ್ಯನು ಸಹ ನಿರ್ಧಾರದ ವಿಷಯದಲ್ಲಿ ಗೊಂದಲಕ್ಕೊಳಗಾಗಿದ್ದನು ಎಂದು ಬರಹಗಾರನು ತನ್ನ ಓದುಗರಿಗೆ ನೆನಪು ಮಾಡಿದನು.

## ದೇವರನ್ನೇ ಹಿಂಬಾಲಿಸುವ ಆಯ್ಕೆಯನ್ನು ಮಾಡಿದ ಮೋಶೆ

### ಹಿಂದೆ ನಡೆದ ಒಂದು ಘಟನೆ

ಫರೋಹನನ ಆದೇಶಕ್ಕೆ ವಿರೋಧವಾಗಿ (ವಿಮೋಚನಕಾಂಡ 1) ಮೋಶೆಯ ತಂದೆ ತಾಯಿಗಳು ಅವನನ್ನು ಕೊಲ್ಲಲಿಲ್ಲ, ಆದರೆ ಅವನನ್ನು ಮುಚ್ಚಿಟ್ಟರು (ವಿಮೋಚನಕಾಂಡ 2:1, 2; ಇಬ್ರಿಯ 11:23). ಅವನ ತಾಯಿಯು ಅವನನ್ನು ಪೆಟ್ಟಿಗೆಯಲ್ಲಿಟ್ಟು ನೈಲ್ ನದಿಯಲ್ಲಿ ತೇಲಿ ಬಿಟ್ಟಳು, ನಂತರ ಫರೋಹನನ ಮಗಳು ಅವನನ್ನು ಕಂಡುಕೊಂಡಳು (ವಿಮೋಚನಕಾಂಡ 2:3-10). ಮೋಶೆಯು ಫರೋಹನನ ಸಂಪತ್ತಿನಲ್ಲಿ ಬೆಳೆದನು (ನೋಡಿರಿ ಅಪೊಸ್ತಲರ ಕೃತ್ಯಗಳು 7:22).

### ನಿರ್ಧಾರದ ಸಮಯ

ಮೋಶೆಯು ಬೆಳೆದವನಾದಾಗ, ಒಂದು ನಿರ್ಧಾರದ ಸಮಯಕ್ಕೆ ಬಂದನು. ಮೆಲ್ನೋಟಕ್ಕೆ ಅದು ಕಷ್ಟಕರ ಅನಿಸಲಿಲ್ಲ. ಅವನು ಐಗುಪ್ತದ ಸಕಲ ಅಧಿಕಾರ ಹಾಗೂ ಐಶ್ವರ್ಯವನ್ನು ಅಥವಾ ಲಾಭವಿಲ್ಲದ್ದನ್ನು ಆಯ್ಕೆ ಮಾಡಬಹುದಾಗಿತ್ತು; ಲಾಭವಿಲ್ಲದ್ದನ್ನು ಆಯ್ಕೆ ಮಾಡಿಕೊಂಡರೆ ಗುಲಾಮರಾಗಿದ್ದ ಇಸ್ರಾಯೇಲ್ ಜನಾಂಗದೊಂದಿಗೆ ತನ್ನನ್ನು ಗುರುತಿಸಿಕೊಳ್ಳಬೇಕಿತ್ತು. ಇಬ್ರಿಯ 11:24-27ರಲ್ಲಿ, ಮೋಶೆಯು ಮಾಡಿದ ಗಾಬರಿ ಪಡಿಸುವ ನಿರ್ಧಾರದ ಕುರಿತು ನೋಡುತ್ತೇವೆ. ಇಲ್ಲಿರುವ ಮೂರು ಪ್ರಮುಖ ಪದಗಳನ್ನು ಗಮನಿಸಿ:

ಮೋಶೆಯು ಐಗುಪ್ತವನ್ನು, ಫರೋಹನನನ್ನು ಹಾಗೂ ಅವನ ಮಗಳನ್ನು “ನಿರಾ ಕರಿಸಿದನು” ಸಮೃದ್ಧಿಯ ಬದಲು, ಬಡತನವನ್ನು ಐಶ್ವರ್ಯಕ್ಕೆ ಮೊದಲು ನಿಂದೆಯನ್ನು ಸ್ವೀಕರಿಸಿದನು.

KJV ಯಲ್ಲಿ “ಬಿಟ್ಟನು” (ವಚನ 27),[1] ಮೋಶೆಯು ತನ್ನ “ಹಳೆಯ ಸೇತುವೆಗಳನ್ನು ಸುಟ್ಟುಬಿಟ್ಟನು” ಎಂಬ ಅರ್ಥವಾಗಿದೆ.

## “ನಂಬಿಕೆಗೆ ಅನುಗುಣವಾದ” ಆಯ್ಕೆಯನ್ನು ಮೋಶೆ ಮಾಡಿದನು

ಮೋಶೆಯು ಮಾಡಿದ *ನಂಬಿಕೆಗನುಗುಣವಾದ* ಆಯ್ಕೆಯನ್ನು ಯಾರು ಮಾಡಬಲ್ಲರು?

(1) ಅದು ಮನೆಯಲ್ಲಿ ಆರಂಭವಾದ ನಂಬಿಕೆ (ವಚನ 23). ಮೋಶೆಯ ತಾಯಿಯೇ

ಅವನ ದಾದಿಯಾಗಿದ್ದಳು, ಅದನ್ನು ಮರೆಯಬಾರದು (ವಿಮೋಚನಕಾಂಡ 2:7-10).

(2) ಜನರೊಂದಿಗೆ ದೇವರು ಇದ್ದಾನೆ ಎಂದು ತಿಳಿಯುವದೆ ನಂಬಿಕೆಯಾಗಿದೆ (ವಚನ 24). "ಪ್ರೀತಿ ಪಾತ್ರರಾದ ಐಗುಪ್ತರ ಬದಲಾಗಿ, ಮೋಶೆ ಕೋಪವೆಬ್ಬಿಸುವ ಇಸ್ರಾಯೇಲ್ಯರನ್ನೇ ಆಯ್ಕೆ ಮಾಡಿಕೊಂಡನು" ಎಂದು ಒಬ್ಬರು ಹೇಳಿರುವರು. ಧರ್ಮಗಳಿಂದ ತಪ್ಪಾದ ಸಂಗತಿಗಳನ್ನು ಕೆಲವರು ಬಯಸುತ್ತಾರೆ. ಅಂತವರುಗಳು ದೇವರು ಹಾಗೂ ದೇವ ಜನರಿರುವ ಸ್ಥಳವನ್ನೇ ಆಯ್ದುಕೊಳ್ಳಬೇಕು.

(3) ನಂಬಿಕೆಯ ಮೂಲಕ ಜೀವಿತದ ಆಕರ್ಷಣೆ ಏನು ಎಂದು ಅರಿತನು (ವಚನ 25ಎ). ಪ್ರಪಂಚದ ಭೋಗಗಳನ್ನು ಮೋಶೆಯು ನಿರಾಕರಿಸಿದನು, ನಾವು ಸಹ ಅವರಂತೆಯೇ ಇರಬೇಕು.

(4) ಮುಂದೆ ಬರುವ ಪ್ರತಿಫಲಕ್ಕಾಗಿ ಅವನು ನಂಬಿಕೆಯಿಂದ ದೇವರಲ್ಲಿ ಭರವಸವಿಟ್ಟಿದ್ದನು (ವಚನ 26).

(5) ದೇವರ ಮತ್ತು ಅವನ ಯೋಜನೆಗೆ ನಂಬಿಕೆಯೇ ಬುನಾದಿಯಾಗಿತ್ತು (ವಚನ 27). ಆ ನಂಬಿಕೆಯಿಂದ ಜಯದ ಭರವಸೆ ಉಂಟಾಯಿತು (ವಚನ 28). ಪಸ್ಕ ಹಬ್ಬವನ್ನು ಆಚರಿಸುವಾಗ, ದೇವಜನರು ಅದನ್ನು ಕ್ರಮವಾಗಿ ಮಾಡಬೇಕು ಅಂದನು (ವಿಮೋಚನ ಕಾಂಡ 12:24). ಆದ್ದರಿಂದ ಅವರು ಐಗುಪ್ತವನ್ನು ಸುಗಮವಾಗಿ ಬಿಟ್ಟು ಹೊರಡುವರು ಎಂಬ ಅಂಶವನ್ನು ತಿಳಿಸಿದನು!

(6) ಅಂತಿಮವಾಗಿ, ಆ ನಂಬಿಕೆಯ ಬೆಂಕಿಯಿಂದ ಜನರ ಹೃದಯದಲ್ಲಿ ಭಕ್ತಿ ಉಂಟಾಯಿತು (ವಚನ 29).

## ಮುಕ್ತಾಯ

ಮೋಶೆಯು ಸರಿಯಾದ ಆಯ್ಕೆಯನ್ನು ಮಾಡಿದ್ದನೇ? ಪುರಾತನ ಕಾಲದ ಪರೋಹನನ ಪಳೆಯುಳಿಕೆಗಳನ್ನು ನೋಡಲು, ದೂಳಿನಿಂದ ತುಂಬಿರುವ ಪುರಾತನ ವಸ್ತು ಸಂಗ್ರಾಲಯಕ್ಕೆ ಹೋಗಬೇಕು; ಆದರೆ ಮೋಶೆಯು ಮಿಲಿಯಾಂತರ ಜನರ ಹೃದಯಗಳಲ್ಲಿರುವನು. ಅದಕ್ಕಿಂತಲೂ ಮಿಗಿಲಾಗಿ, ಅವನು ದೇವರ ಸನ್ನಿಧಿಯಲ್ಲೇ ಇರುವನು.

ನಿರ್ಧಾರದ ಸಮಯಗಳಲ್ಲಿ, ಜನರು ಕೂಡುವ ರಸ್ತೆಯಲ್ಲಿರುತ್ತಾರೆ. ಒಂದು ವೇಳೆ ಈಗ ಈ ಸ್ಥಿತಿ ನಿಮ್ಮಲ್ಲಿರುವದಾದರೆ, ಲೋಕದ ಲಾಭದ ಕಡೆಗೆ ಗಮನ ನೀಡದೆ, ದೂರದೃಷ್ಟಿಯನ್ನು ಹೊಂದುವ ನಿರ್ಧಾರವನ್ನು ಮಾಡಿರಿ ಎಂದು ಪ್ರಾರ್ಥಿಸುತ್ತೇನೆ.

---

ಟಿಪ್ಪಣಿ

[1]The Greek word translated "left" and "forsook" (*kataleipo*) is a strengthened form of "leave." In this passage, it has the sense of abandoning. (W. E. Vine, Merrill F. Unger, and William White, Jr., *Vine's Complete Expository Dictionary of Old and New Testament Words* [Nashville: Thomas Nelson Publishers, 1985], 362.)